ಹುಮ್ಮಸ್ಸಿನಲ್ಲಿ ಮುಂದೆ ಹೆಜ್ಜೆಯಿಟ್ಟೆ.

ನನಗಿಂತಲೂ ವೇಗವಾಗಿ ಬಂದ ಬೇತಾಳ ತನ್ನ ನೀಳ ತೋಳುಗಳಿಂದ ನನ್ನನ್ನು ಬಳಸಿತು. ನನ್ನ ಮೈಯನ್ನು ಸಿಕ್ಕಿದೆಡೆ ಪರಚತೊಡಗಿತು.

ಅಪ್ರತಿಭನಾದ ನನಗೆ ಸುಧಾರಿಸಿಕೊಳ್ಳಲು ನಿಮಿಷಗಳು ಬೇಕಾದವು. ಅಷ್ಟರೊಳಗೆ ಬೇತಾಳ ನನಗೆ ಎಲ್ಲೆಂದರಲ್ಲಿ ಗೀರುಗೀರಾಗಿ ಆಳ ಆಳವಾಗಿ ಪರಚಿ ನನ್ನ ಕಣ್ಣುಗಳನ್ನು ಕೀಳಲು ಬಾಚಿ ಹಲ್ಲುಗಳನ್ನು ಮುಂಚಾಚುತ್ತಿತ್ತು.

ನಾನು ಅರೆಚಣವನ್ನೂ ವ್ಯರ್ಥ ಮಾಡುವಂತಿರಲಿಲ್ಲ. ರಕ್ಷಣೆಗಾಗಿ ಇನ್ನಾರ ಮೊರೆಯನ್ನೂ ಹೋಗುವಂತಿರಲಿಲ್ಲ.

ಬೇತಾಳದ ಬಾಚಿಹಲ್ಲುಗಳ ಮೇಲೆ ಅಂಗೈ ಒತ್ತಿ ತಡೆದೆ. ಇನ್ನೊಂದು ಕೈಯಿಂದ ಅದರ ಕುತ್ತಿಗೆಯನ್ನೇ ಹಿಡಿದೆ. ಆದರೆ, ಅದು ಕಚಗುಳಿಯಿಟ್ಟು ನನ್ನಿಂದ ಬಿಡಿಸಿಕೊಂಡಿತು. ಮತ್ತೆ ಉಗುರುಗಳಿಂದ ಎಲ್ಲೆಂದರಲ್ಲಿ ಪರಚುವುದನ್ನು ಮುಂದುವರೆಸಿತು. ನನಗೆ ಮೈಯೆಲ್ಲಾ ಉರಿ. ಮನಸ್ಸೂ ಸಹಾ. ಕೈಮರಗಳ ಅಕ್ಷರಗಳನ್ನು ನಿರಾಕರಿಸಿದ ನಾನು ಇದೆಂತಹ ಸಂಕಷ್ಟಗಳಿಗೆ ಸಿಕ್ಕಿಕೊಂಡೆ!

ಮೈಯಲ್ಲಿನ ಶಕ್ತಿಯನ್ನೆಲ್ಲಾ ಕೈಗಳಿಗೆ ಹೂಡಿದೆ. ಆ ಕೈಗಳನ್ನು ಬೇತಾಳದ ಕಂಕುಳುಗಳಿಗೆ ಹೂಡಿದೆ. ಅದನ್ನೆತ್ತಿ ಬೀಸಿ ಒಗೆದೆ. ತಲೆ ಕೆಳಗಾಗಿ ನೆಲಕ್ಕೆ ಬಿದ್ದ ಬೇತಾಳ ಛಂಗನೆಗರಿ ಬಾಲದ ಮೇಲೆ ನಿಂತಿತು. ಮುಷ್ಟಿ ಬಿಗಿಸಿ ಅದರ ಮೂತಿಗೆ ಬಾರಿಸಿದೆ. ಅದು ಸುಂದರವಾಗಿದೆ ಎನ್ನುವುದನ್ನು ಆಗ ಬೇಕೆಂದೇ ಮರೆತುಬಿಟ್ಟೆ. ಅದು ಇದಿರಿಗಿಲ್ಲದ ದಿಕ್ಕನ್ನರಸಿ ಓಡಿದೆ.

ಸುಸ್ತಾಗಿ ನಿಂತು ಹಿಂದಕ್ಕೆ ತಿರುಗಿ ನೋಡಿದಾಗ ನಾಯಿ ಮಲಗಿದ್ದಂತೇ ತಲೆಯೆತ್ತಿ ಬೊಗಳುತ್ತಿತ್ತು, ಸರ್ಪ ಮರಕ್ಕೆ ಸುತ್ತಿಕೊಂಡಂತೇ ಹಿಸ್‌ಗರೆಯುತ್ತಿತ್ತು, ಬೇತಾಳ ಕೊಂಬೆಯಲ್ಲಿ ನೇತಾಡುತ್ತಾ ಕೇಕೆ ಹಾಕುತ್ತಿತ್ತು. ದಾರಿ ಮೂರಾಗುವೆಡೆ ನಿಂತಿದ್ದ ಆ ಮೂರು ಬೆತ್ತಲೆ ಮಕ್ಕಳು ನನ್ನತ್ತ ಕೈಸನ್ನೆ ಮಾಡಿ ಏನೋ ಹೇಳುತ್ತಿದ್ದವು. ಬೊಗಳಾಟ, ಹಿಸ್‌ಗರೆತ, ಕೇಕೆಗಳಲ್ಲಿ ನನಗದು ಕೇಳಿಸುತ್ತಿರಲಿಲ್ಲ.

ಜೀವ ತೆಗೆಯುವ ವಿಷದ ಹಲ್ಲು, ಎದೆ ಬಗೆಯುವ ಕೋರೆಹಲ್ಲು, ಕಣ್ಣು ಕೀಳುವ ಬಾಚಿಹಲ್ಲುಗಳನ್ನು ನೋಡುತ್ತಿದ್ದಂತೇ ನನ್ನದೆಯಲ್ಲಿ ಭಯ ಉಕ್ಕಿತು, ಆ ಭಯ ಹಳೆಯದೆನಿಸಿತು. ಅವೆಲ್ಲವೂ ಒಟ್ಟಿಗೇ ದಾಳಿಯಿಟ್ಟರೆ ನಾನು ಜೀವಂತವಾಗಿ ಪಾರಾಗಬಲ್ಲೆನೇ? ಮಕ್ಕಳ ಸನ್ನೆಯೂ ಅದೇ ಹೇಳುತ್ತಿರಬೇಕು. ಮೂರೂ ಹಲ್ಲುಗಳನ್ನು ಮೊದಲೇ ತೋರಿಸಿ ಎಚ್ಚರಿಸಲು ಪ್ರಯತ್ನಿಸಿದ್ದವರಲ್ಲವೇ ಅವರು?

ನಾನು ಓಡತೊಡಗಿದೆ. ಕಾಲುಗಳು ಸೋಲುವವರೆಗೂ ಓಡುತ್ತಲೇ ಇದ್ದೆ. ಆಗೊಮ್ಮೆ ಮಳೆ ಬಂದು ಮತ್ತೆ ಬಿಸಿಲಾಯಿತು ದಾರಿಯ ಮಣ್ಣು ಮಳೆಯಲ್ಲಿ ಕೊಚ್ಚಿಹೋಗಿ ಕೆಳಗಿನ ಕಲ್ಲುಗಳು ಬಿಸಿಲಿನಲ್ಲಿ ಹೊಳೆದವು.

ನಾನು ಬಿದ್ದೆ... ಎದ್ದೆ... ಓಡಿದೆ...

ಅದೆಷ್ಟುಸಲಆಸರಣಿಪುನರಾವರ್ತನೆಯಾಯಿತೋ. ಇನ್ನು ಸಾಧ್ಯವಿಲ್ಲ ಅನಿಸಿದಾಗ ತೂರಾಡುತ್ತಾ ನಿಂತೆ.

ನಾನು ನಿಂತದ್ದು ಬೆಟ್ಟದ ನೆತ್ತಿಯ ಮೇಲೆ.

ಅಂದರೆ ನಾನು ನನ್ನ ದಾರಿಗೆ ಸೇರಿದ್ದೇನೆ! ಕಂಟಕಗಳು ಕಳೆದಿವೆ!

ಒಮ್ಮೆ ನಿರಾಳವಾಗಿ ಉಸಿರ್ಗರೆದು ಮುಂದಕ್ಕೆ ನೋಟ ಹರಿಸಿದೆ. ನಾನು ನಿಂತಿದ್ದದ್ದು ಕಣ್ಣು ಸಾಗುವ ದೂರಕ್ಕೂ ಅಂತ್ಯವೇ ಇಲ್ಲದ ವಿಶಾಲ ಪ್ರಸ್ಥಭೂಮಿಯ ಅಂಚಿನಲ್ಲಿ. ಮುಂದೆ ವಿಶಾಲ ಹಸಿರು ಹುಲ್ಲು ಬಯಲು, ಅಲ್ಲಲ್ಲಿ ಮರಗಳು, ಎಡಕ್ಕೆ ಮರಗಳ ಹಿಂದೆ ಒಂದು ತಿಳಿನೀರಿನ ಕೆರೆ,, ಬಲಕ್ಕೆ ಹೊರಳಿದರೆ ಅಲ್ಲೊಂದು ದಟ್ಟ ವನ. ರಮಣೀಯ ನೋಟ. ಕಣ್ತುಂಬಿಕೊಂಡೆ. ಇದಿರಿನಲ್ಲಿ ಒಂದಷ್ಟು ಜನ ಕಂಡರು. ಅವರು ನನಗೆ ಹತ್ತಿರಾಗುತ್ತಿದ್ದರು, ಆಗುತ್ತಾ ಹೆಚ್ಚುತ್ತಿದ್ದರು, ಹತು ನೂರು, ನೂರು ಸಾವಿರ, ಸಾವಿರ ಹತ್ತು ಸಾವಿರ...

ನಾನು ನೋಡಿಯೇ ನೋಡಿದೆ.

ಕೆಲವೇ ಕ್ಷಣಗಳಲ್ಲಿ ನನ್ನ ಮುಂದೆ ಜನ, ಜನಸಾಗಾರ! ಅನಿರೀಕ್ಷಿತ, ಅನೂಹ್ಯ, ಅಲೌಕಿಕ ಈ ಪರಿಯ ಜನಾವರಣ. ನಿಮಿಷಗಳ ಕಾಲ ನಾನು ಕಿಂಕರ್ತವ್ಯಮೂಢನಾದೆ. ಸಾವರಿಸಿಕೊಂಡು ಬಂದ ದಾರಿಯತ್ತ ಒಮ್ಮೆ ಕಣ್ಣು ಹಾಯಿಸಿದೆ. ಕೆಳಗೆ ಸರ್ಪ, ನಾಯಿ, ಬೇತಾಳ ನನ್ನತ್ತಲೇ ನೋಡುತ್ತಿದ್ದವು. ಮಕ್ಕಳಿರಲಿಲ್ಲ. ಸರಕ್ಕನೆ ಇತ್ತ ಮುಖ ಹೊರಳಿಸಿಕೊಂಡೆ. ಜನಸ್ತೋಮ ನನ್ನತ್ತ ಕೈಬೀಸಿತು. ಬೆನ್ನಹಿಂದಿನ ಮತ್ತು ಕಣ್ಣಮುಂದಿನ ಜಗತ್ತುಗಳ ನಡುವೆ ಅದೆಷ್ಟು ಅಂತರ!